ಮತ್ತಿತರ ಲೇಖಕರು ಅವನ ಕೃತಿಗಳನ್ನು ಕನ್ನಡಕ್ಕೆ ತಂದಿದ್ದಾರೆ. ಈ ಸಂದರ್ಶನವನ್ನು 1981ರಲ್ಲಿ ಮಾಡಲಾಗಿದೆ. ಸಂದರ್ಶಕರು: ಪೀಟರ್ ಎಚ್. ಸ್ಟೋನ್

◆ **ನೀವು ನಿಮ್ಮ ಬರವಣಿಗೆಯನ್ನು ಹೇಗೆ ಆರಂಭಿಸಿದಿರಿ?**

ಕಾರ್ಟೂನ್ಸ್ ಬಿಡಿಸಿ. ನಾನು ಓದು, ಬರಹ ಶುರು ಮಾಡುವ ಮೊದಲು ಶಾಲೆಯಲ್ಲಿ ಮನೆಯಲ್ಲಿ ಕಾರ್ಟೂನ್ಸ್ ಬಿಡಿಸುತ್ತಿದ್ದೆ. ಶಾಲೆಯಲ್ಲಿ ಕಿರು ಲೇಖನ ಹಾಗೂ ತಕರಾರು ಪತ್ರ ಬರೆಯುವ ಜವಾಬ್ದಾರಿಯನ್ನು ನನ್ನ ಮೇಲೆ ಹೊರಿಸಲಾಗಿತ್ತು. ಇದರಿಂದಾಗಿ ನಾನು ಲೇಖಕ ಎನಿಸಿಕೊಂಡೆ. ಕಾಲೇಜಿಗೆ ಹೋದಾಗ ಅಲ್ಲಿ ಉತ್ತಮ ಸಾಹಿತ್ಯಿಕ ವಾತಾವರಣ ಲಭಿಸಿತು. ಇದರಿಂದಾಗಿ ನನಗೆ ಸಮಕಾಲೀನ ಲೇಖಕರ ಪರಿಚಯವಾಯಿತು. ಒಂದು ರಾತ್ರಿ ನನ್ನ ಗೆಳೆಯನೊಬ್ಬ ನೀಡಿದ ಜರ್ಮನಿಯ ಲೇಖಕ ಫ್ರಾಂಝ್ ಕಾಫ್ಕಾನ ಕಥಾಸಂಗ್ರಹದಲ್ಲಿದ್ದ ಪ್ರಸಿದ್ಧ ಕಥೆ 'ಮೆಟಾಮಾರ್ಫಸಿಸ್' ಓದಿ ಮುಗಿಸಿದೆ. ಅವನ ಕಥೆಗಳೆಲ್ಲ ಬೌದ್ಧಿಕ ಸ್ವರೂಪದ್ದಾಗಿದ್ದವು. ನಾನೂ ತಕ್ಷಣ ಈ ಬಗೆಯ ಕಥೆಗಳನ್ನು ಬರೆಯಲು ಆರಂಭಿಸಿದೆ. ಈ ಕಥೆಗಳು 'ಎಲ್ ಹೆರಾಲ್ಡೋ' ಎಂಬ ಪತ್ರಿಕೆಯಲ್ಲಿ ಪ್ರಕಟಗೊಂಡಾಗ ನನ್ನ ಕಥೆಗಳ ಮೇಲೆ ಜೇಮ್ಸ್ ಜಾಯ್ಸ್‌ನ ಪ್ರಭಾವವಿದೆ ಎಂದು ಹೇಳಲಾಯಿತು.

◆ **ನೀವು ಜಾಯ್ಸ್‌ನನ್ನು ಓದಿದ್ದೀರಾ?**

ಓದಿರಲಿಲ್ಲ. ಹೀಗಾಗಿ ಅವನ ಕಾದಂಬರಿ 'ಯೂಲಿಸಿಸ್' ಓದಲು ಆರಂಭಿಸಿದೆ. ಅದರಿಂದ ನಾನು ಸಾಕಷ್ಟು ಕಲಿತೆ. ಸ್ವತಃ ತನ್ನೊಂದಿಗೆ ಮಾಡಿದ ಸಂಭಾಷಣೆಯ ತಂತ್ರ ಅದು ಎಂಬುದು ನನಗೆ ಅರ್ಥವಾಯಿತು. ಬಳಿಕ ವರ್ಜಿನಿಯಾ ವೂಲ್ಫ್ ಸಹ ಇದೇ ತಂತ್ರವನ್ನು ಬಳಸಿದ್ದು ಗಮನಕ್ಕೆ ಬಂತು. ಈ ತಂತ್ರವನ್ನು ಜಾಯ್ಸ್‌ಗಿಂತ ವೂಲ್ಫ್ ಹೆಚ್ಚು ಪ್ರಭಾವಶಾಲಿಯಾಗಿ ಬಳಸಿದ್ದು ಕೂಡ ಗೊತ್ತಾಯಿತು.

◆ **ಯುವ ಲೇಖಕರು ತಮ್ಮ ಬಾಲ್ಯವನ್ನು ಅಥವಾ ಅಂಥ ಅನುಭವವನ್ನು ನಿರಾಕರಿಸುತ್ತಾರೆ ಅಥವಾ ಅಂಥವುಗಳಿಗೆಲ್ಲ ಬೌದ್ಧಿಕ ರೂಪ ನೀಡುತ್ತಾರೆ ಎಂದೆನಿಸುತ್ತದೆಯೇ ನಿಮಗೆ?**

ಇಲ್ಲ, ನನಗೆ ಹಾಗನಿಸುವುದಿಲ್ಲ. ಈ ಪ್ರಕ್ರಿಯೆಯು ವಿರುದ್ಧವಾಗಿ ನಡೆಯುತ್ತಿದೆ. ನಿಮ್ಮ ಜೀವನದಲ್ಲಿ ಏನೇನು ನಡೆದಿದೆಯೋ, ಅದನ್ನೆಲ್ಲ ಬರೆಯಿರಿ ಎಂದೇ ಅವರಿಗೆ ನನ್ನ ಸಲಹೆ. ಕಂಡಿದ್ದು, ಕೇಳಿದ್ದು ಅನುಭವಿಸಿದ್ದನ್ನು ಕಥನ ಮಾಡುವುದು ಸುಲಭ. ನಾನು ಬರೆದ ಪ್ರತಿಯೊಂದು ಪದಕ್ಕೂ ಸಾಲಿಗೂ ವಾಸ್ತವದ ನಂಟಿದೆ.

◆ **ನೀವು ಯಾರಿಗಾಗಿ ಬರೆಯುತ್ತೀರಿ? ನಿಮ್ಮ ಓದುಗ ವರ್ಗ ಯಾವುದು?**

'ಲೀಫ್ ಸ್ಟಾರ್ಮ್' ನಾನು ಗೆಳೆಯರಿಗಾಗಿ ಬರೆದೆ. ಅವರಿಗೆ ನನ್ನ ಬರಹದ ಬಗ್ಗೆ ಕುತೂಹಲವಿದೆ. ಸಾಮಾನ್ಯವಾಗಿ ನೀವು ಯಾರಿಗಾದರೂ ಬರೆಯುತ್ತಲೇ ಇರುತ್ತೀರಿ. ನಾನು ಬರೆಯುವುದು ಗೆಳೆಯರಿಗಾಗಿಯೇ. ಅಂದರೆ ನಾನು ಬರೆಯುವಾಗ ವಿಶಿಷ್ಟ ಓದುಗರ ಬಗೆಗೇ ಯೋಚಿಸುತ್ತೇನೆ. 'ಒನ್ ಹಂಡ್ರೆಡ್ ಇಯರ್ಸ್ ಆಫ್ ಸಾಲಿಟ್ಯೂಡ್' ಬರೆದಾದ ಬಳಿಕ ಈ ಚಿತ್ರ ಬದಲಾಯಿತು. ಇಂದು ನನ್ನ ಬರಹ ಕೋಟ್ಯಂತರ ಜನರನ್ನು ತಲುಪುತ್ತಿದೆ. ಆದರೆ, ಈ ಓದುಗರಾಗಲಿ, ಜನರಾಗಲಿ ನನಗೆ ಗೊತ್ತಿಲ್ಲ. ಇದರಿಂದಾಗಿ ನಾನು ಚಡಪಡಿಸುತ್ತೇನೆ. ಅದರಿಂದ ತೊಂದರೆಯೂ ಆಗುತ್ತದೆ. ಕೋಟ್ಯಂತರ ಕಂಗಳು ನಿಮ್ಮನ್ನು ದಿಟ್ಟಿಸುತ್ತವೆ ಮತ್ತು ಅವರೇನು ಯೋಚಿಸುತ್ತಿದ್ದಾರೆ ಎನ್ನುವುದು ನಿಮಗೇ ಗೊತ್ತಿಲ್ಲ.